

# ವಿವಾಹ ಸಂಬಂಧಿತ ರೂಢಿಗಳು

## ವಿವಾಹ!

ಈ ಪದದಲ್ಲೇ ಏನೋ ಒಂದು ವಿಧದ ಮೋಹ.

ಹೆಣ್ಣು ವಿಧಿವತ್ತಾಗಿ ಗಂಡನ ಮನೆ ಸೇರುವ ಈ ವಿಧಿಯಲ್ಲಿ ನಂಬಿಕೆಗಳ ಸರಮಾಲೆಯೇ ಇದೆ.

**ಜಾತಕಫಲ**

ಜಾತಕ ಎಂಬುದು ಒಂದು ಟೈಪ್ ಕ್ಯಾಸ್ಟಿಂಗ್ ಅಷ್ಟೆ. ಎಂದರೆ ಇಂತಹ ಜಾತಕದವರು ಇಂತಿಂತಹ ಗುಣಗಳನ್ನು ಹೊಂದಿರುತ್ತಾರೆ ಎಂಬ ಒಂದು ರೆಡಿಮೇಡ್ ಲಿಸ್ಟ್! ಇದರ ಸತ್ಯತೆ ಬೊಗಳುವ ನಾಯಿ ಕಚ್ಚುವುದಿಲ್ಲ ಎಂಬ ನಾಣ್ಣುಡಿಯಷ್ಟೇ ಸತ್ಯ. ಜಾತಕದಲ್ಲಿ ಮೂವತ್ತೆರಡು ಗುಣಗಳು ಹೊಂದಬೇಕೆಂಬ ನಿಯಮವಿದ್ದು, 28 ಗುಣಗಳಾದರೂ ಹೊಂದಲೇ ಬೇಕೆನ್ನುತ್ತಾರೆ. ಇಷ್ಟು ಗುಣಗಳು ಹೊಂದಾಣಿಕೆಯಾದರೆ ಸಂಸಾರ ಚೆನ್ನಾಗಿರುತ್ತದೆ ಎಂಬುದು ನಂಬಿಕೆ. ಕೋರ್ಟಿನಲ್ಲಿ ಜರುಗುತ್ತಿರುವ ಹಲವಾರು ವಿಚ್ಛೇದನಗಳು ಇದು ಸುಳ್ಳು ಎನ್ನುವುದಕ್ಕೆ ಸಾಕ್ಷಿ. ಜಾತಕವೇ ಇರದ ಸಂಸಾರಗಳೂ ಚೆನ್ನಾಗಿ ನಡೆದುಕೊಂಡು ಬಂದಿರುವುದು ಜಾತಕಫಲ ಕಾಕತಾಳೀಯವಷ್ಟೆ ಎಂಬುದಕ್ಕೆ ಮತ್ತೊಂದು ಪುರಾವೆ. ಅಂದಿನ ದಿನಗಳಲ್ಲಿ ಗಂಡು ಹೆಣ್ಣು ಬಾಲ್ಯಾವಸ್ಥೆಯಲ್ಲಿರುವಾಗಲೇ, ಒಬ್ಬರನ್ನೊಬ್ಬರು ನೋಡುವ ಮುನ್ನವೇ ಹಿರಿಯರು ಇವರುಗಳ ಮದುವೆ ನಿರ್ಧರಿಸಿಬಿಡುತ್ತಿದ್ದುದರಿಂದ ಗುಣ ಹೊಂದಾಣಿಕೆಗೆ ಜಾತಕಫಲವನ್ನು ಅವಲಂಬಿಸುತ್ತಿದ್ದರು. ಈಗ ಗಂಡು, ಹೆಣ್ಣು ಪರಸ್ಪರ ನೋಡಿ, ಮಾತನಾಡಿ, ಪರಸ್ಪರರ ವಿದ್ಯೆ, ಅರ್ಹತೆಗಳನ್ನು ತಿಳಿದುಕೊಂಡು, (ಕೆಲವೊಮ್ಮೆ ಮೆಡಿಕಲ್ ಚೆಕಪ್ ಕೂಡ ಮಾಡಿಸಿಕೊಂಡು), ಮನದಿಂದ ಹಣದವರೆಗೆ, ರುಚಿಯಿಂದ ಅಭಿರುಚಿಯವರೆಗೆ ಪ್ರಸ್ತಾಪಿಸುವಾಗ ಜಾತಕಗಳು ಖಂಡಿತ ಅನಗತ್ಯ. ಜಾತಕ ನೋಡುವುದರಿಂದ ಒಂದು ಪ್ರಯೋಜನವಂತೂ ಇದೆ ಎಂಬುದು ಸತ್ಯ; ಹೆಣ್ಣು/ಗಂಡು ಒಪ್ಪಿಗೆಯಾಗದಿದ್ದಾಗ ನೇರವಾಗಿ ಮುಖಕ್ಕೆ ಹೊಡೆದಂತೆ ನಿರಾಕರಿಸುವ ಬದಲು ಜಾತಕ ಹೊಂದಲಿಲ್ಲ ಎಂದು ನುಣುಚಿಕೊಳ್ಳುವುದು ಜಾಣತನ.

**ಆಷಾಢಮಾಸದಲ್ಲಿ**

ಆಷಾಢದಲ್ಲಿ ಅತ್ತೆ ಸೊಸೆಯರು ಒಂದೇ ಹೊಸ್ತಿಲನ್ನು ದಾಟಬಾರದು ಅಥವಾ ತುಳಿಯಬಾರದು, ಹಾಗೆ ಮಾಡಿದಲ್ಲಿ ಕೆಟ್ಟದಾಗುತ್ತದೆ ಎಂಬ ಕ್ರಮವೊಂದಿದೆ. ಜ್ಯೇಷ್ಠ ಮಾಸದಲ್ಲಿ ಮದುವೆಯಾದ ಗಂಡುಗಳಿಗಂತೂ ಇದು ಶಾಪವೇ ಸೈ. ಮದುವೆಯಾದ ತಿಂಗಳಲ್ಲೇ ಒಂದು ತಿಂಗಳಕಾಲ ಮಡದಿಯಿಂದ ದೂರವಿರಬೇಕಾದಂತಹ ಶಿಕ್ಷೆ! ಇದಕ್ಕೆ ಒಂದು ಹಿನ್ನೆಲೆ ಇದೆ.

ಭಾರತ ಹಳ್ಳಿಗಳ ದೇಶ. ಇಲ್ಲಿ ಕೃಷಿಯೇ ಜೀವನದ ಆಧಾರ. ಆಷಾಢದಲ್ಲಿ ಬೀಳುವ ಸಣ್ಣ ಮಳೆಯಲ್ಲಿ ಬಿತ್ತನೆ ಕಾರ್ಯ ಹಾಗೂ ಇತರ ಕೃಷಿಸಂಬಂಧಿತ ಕಾರ್ಯಗಳನ್ನು ಕೈಗೊಳ್ಳದಿದ್ದರೆ ಇಡೀ ವರ್ಷದ ಬೆಳೆಗೆ ತೊಂದರೆಯುಂಟಾಗಬಹುದು. ಮುಖ್ಯವಾಗಿ ಕಬ್ಬು, ಗೋಧಿ, ಬತ್ತದಂತಹ ಬೆಳೆಗಳು ಈ ಸಮಯದಲ್ಲಿ ಹೆಚ್ಚಿನ ಗಮನವನ್ನು ಬೇಡುತ್ತವೆ. ಇಂತಹ ಸಮಯದಲ್ಲಿ ನವವಿವಾಹಿತನ ಜೊತೆ ಹೆಂಡತಿ ಇದ್ದರೆ ಅವನನ್ನು ಹೊರತರಲು ಕ್ರೇನ್ ತರಬೇಕಾದೀತೋ ಏನೋ... ಕೃಷಿ ವೃದ್ಧಿಸಿ, ವಾರ್ಷಿಕ ಬದುಕಿಗೆ ಕುಂದಾಗದಿರಲು ನವದಂಪತಿಗಳು ಅಗಲಿದರೆ ಮಾತ್ರ ಗಂಡು ಹೊಲಕ್ಕೆ ಹೋಗುತ್ತಾನೆ ಎಂಬುದನ್ನು ಮನಗಂಡ ಹಿರಿಯರು ಅವರನ್ನು ಬೇರೆ ಮಾಡಲು ನಿರ್ಧರಿಸಿ, ಗಂಡ-ಹೆಂಡತಿ ಒಟ್ಟಿಗೆ ಇರುವಂತಿಲ್ಲ ಎಂದು ಹೇಳಲಾಗದ ಕಾರಣ, ಅತ್ತೆ-ಸೊಸೆ ಒಂದೇ ಹೊಸ್ತಿಲು ತುಳಿಯಬಾರದು ಎಂಬ ಶಾಸ್ತ್ರದ ಸೋಗನ್ನು ತೊಡಿಸಿದರು.

ಪಟ್ಟಣಗಳ, ಕೈಗಾರಿಕೆಗಳೇ ಜೀವಾಳವಾಗಿರುವ ಈಗಿನ ಕಾಲದಲ್ಲಿ ಈ ವಿಧವಾಗಿ ಬೇರ್ಪಡುವುದು ಅನಗತ್ಯ. ಮದುವೆಯಾದ ಹೊಸದರಲ್ಲಿ ಏನಾದರೂ ಏರುಪೇರುಗಳು, ವೈಮನಸ್ಯಗಳು ಉಂಟಾಗಿದ್ದು, ಅದನ್ನು ಮಗಳು ಹೇಳಿಕೊಳ್ಳುವ ಪರಿಸ್ಥಿತಿಯಲ್ಲಿ ಇರದಿದ್ದಾಗ ಈ ವಿಧದ ಶಾಸ್ತ್ರವು ಮಗಳನ್ನು ತವರಿಗೆ ಕಳುಹಿಸಲು ಅನುಕೂಲಕರವಾಗಿದ್ದು, ಮಗಳು ತನ್ನ ತವರಿನವರೊಡನೆ ಅಲ್ಲಿನ ಕಷ್ಟಗಳನ್ನು ಹಂಚಿಕೊಂಡು, ಪರಿಹಾರವನ್ನು ಪಡೆದು ಮರಳಲು ಆಗಿನ ಕಾಲದಲ್ಲಿ ಈ ಬೇರ್ಪಡೆ ಅನುಕೂಲಕರವಾಗಿತ್ತು ಎಂಬುದು ನಿಜ. ಮಗಳನ್ನು ಹುಡುಕುತ್ತಾ ಅಳಿಯ ಬಂದರೆ ಅವನೂ ಅತ್ತೆ ದಾಟುವ ಹೊಸ್ತಿಲು ದಾಟಬಾರದೆಂಬ ನಿಯಮವಿದ್ದುದರಿಂದ ಒಂದು ತಿಂಗಳು ವಿರಹಾಗ್ನಿಯಲ್ಲಿ ಬೆಂದ ಸತಿ ಪತಿಯರು ನವೋಲ್ಲಾಸದಿಂದ ಪರಸ್ಪರ ಎದುರುಗೊಳ್ಳುತ್ತಿದ್ದುದು ಅವರಲ್ಲಿನ ಪ್ರೀತಿಯನ್ನು ಹೆಚ್ಚಿಸಲು ಸಹಾಯಕವಾಗುತ್ತಿತ್ತು ಎಂಬುದೂ ನಿಜ.

ಆದರೆ ಈಗಿನ ಮೊಬೈಲ್, ಇಂಟರ್‌ನೆಟ್ ಯುಗದಲ್ಲಿ ಆಡಿದ ಮಾತುಗಳು ಕೆಲವೇ ಕ್ಷಣಗಳಲ್ಲಿ ಮೈಲಿಗಳಾಚೆ, ಸಾಗರದಾಚೆ ತಲುಪುವಾಗ ಈ ಬೇರ್ಪಡೆ-ಸೇರ್ಪಡೆಯ ಅವಶ್ಯಕತೆ ಕಾಣುತ್ತಿಲ್ಲ. ಅಲ್ಲದೆ, ಉದ್ಯೋಗಸ್ಥ ಮಹಿಳೆಯರು ಬೇರೆಡೆ ಇರುವ ತವರಿಗೆ ಹೋಗಿ, ಅಲ್ಲಿಂದ ಕೆಲಸಕ್ಕೆ ತೆರಳುವುದು ತ್ರಾಸಕರ. ಇಂತಾಗಿ ಈ ಪದ್ಧತಿ ಬಿಡುವುದೇ ಈಗಿನ ಜನರಿಗೆ ಸರಿಯಾದ ಮಾರ್ಗ.

ಮೊದಲ ಆಷಾಢಕ್ಕೆ ಮಾತ್ರ ಈ ಪದ್ಧತಿ ಏಕೆ ಸೀಮಿತ? ಎರಡನೆಯ ವರ್ಷವೂ ಕೃಷಿ ಇದ್ದೇ ಇರುತ್ತದಲ್ಲ ಎಂಬ ಪ್ರಶ್ನೆ ಹಲವರಲ್ಲಿ ಉದ್ಭವಿಸುತ್ತದೆ. ನಮ್ಮಲ್ಲಿ ಮದುವೆಯಾದ ಒಂದು ವರ್ಷದಲ್ಲಿ ಮಕ್ಕಳನ್ನು ಪಡೆಯುವುದು ಸಂಪ್ರದಾಯ. ಮಗು ಕೈಗೆ ಬಂದಮೇಲೆ ಹೆಣ್ಣು ಅದರತ್ತ ಗಮನ ಕೊಡುವುದು ಹೆಚ್ಚು. ಆಗ ಗಂಡನಿಗೆ ಆಟೋಮ್ಯಾಟಿಕ್ ಗೇಟ್‌ಪಾಸ್! ಅಲ್ಲದೆ ಮದುವೆಯ ಹೊಸದರ ತುಡಿತ ವರ್ಷಕ್ಕೆ ಕೊಂಚ ತಗ್ಗಿದ್ದು, ಗಂಡೂ ಹೆಚ್ಚು ಜವಾಬ್ದಾರಿ ಹೊರುವವನಾಗಿರುತ್ತಾನೆ. ನೆನಪಿರಲಿ; ಈ ಶಾಸ್ತ್ರಗಳು ಇದ್ದ ಕಾಲದಲ್ಲಿ ಗಂಡಿಗೆ ಹದಿನಾರು, ಹದಿನೆಂಟನೆಯ ವಯಸ್ಸಿಗೇ ಮದುವೆಯಾಗಿ ಇನ್ನೂ ಹುಡುಗಾಟವಿರುತ್ತಿತ್ತು. ಮದುವೆಯ ನಂತರ ಹೆಂಡತಿಯ ಜವಾಬ್ದಾರಿ ಬಿದ್ದಾಗ ಕರ್ತವ್ಯದ ಅರಿವೂ ಮೂಡುತ್ತಿತ್ತು. ಹೀಗಾಗಿ ಎರಡನೆಯ ವರ್ಷಕ್ಕೆ ಹೊಸ್ತಿಲಿನ ಕಟ್ಟುಪಾಡನ್ನು ಸಡಿಲಿಸಲಾಗುತ್ತಿತ್ತು.

■ ವೈ-ಚಾರಿ